**ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ಇಂಡಿ.**

**ಸಿ.ಸಿ.ನಂ.1297/2017**

**ಸಿ.ಡಬ್ಲ್ಯೂ-2**

**ಪಿ.ಡಬ್ಲ್ಯೂ-4**

| | | |
|---|---|---|
| ಸಾಕ್ಷಿಯ ಹೆಸರು | : | ಹಣಮಂತ ಬಿರಾದಾರ |
| ತಂದೆ/ಗಂಡನ ಹೆಸರು | : | ಲಕ್ಷ್ಮಣ |
| ವಯಸ್ಸು | : | 40 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸಸ್ಥಳ | : | ಚಡಚಣ |

**ದಿನಾಂಕ:23-04-2026 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ ರವರಿಂದಃ**

ಚಾಸಾ 3 ರವರ ಪರಿಚಯ ಇರುವುದಿಲ್ಲ. ದಿಃ19.04.2017 ರಿಂದ ಗೋವಿಂದಪುರ ಗ್ರಾಮದಲ್ಲಿ 10.15 ರಿಂದ 11.15 ರ ವರೆಗೆ ಪಂಚನಾಮೆಯನ್ನು ಮಾಡಿ 180 ML ಅಳತೆಯ ಓ.ಟಿ. ವಿಸ್ಕಿಯ 42 ಸರಾಯಿ ಪೌಚುಗಳನ್ನು ಜಪ್ತಿಪಡಿಸಿಕೊಂಡು ಅದರಲ್ಲಿ ಒಂದನ್ನು ರಾ.ಪ. ಕುರಿತು ಪ್ರತ್ಯೇಕಿಸಿರುತ್ತಾರೆ. ಸಾಕ್ಷಿಯು ನಿ.ಪಿ.3 ರಲ್ಲಿರುವ ತನ್ನ ಸಹಿ ನೋಡಿ ಗುರುತಿಸಿದ್ದು ಅದನ್ನು ನಿ.ಪಿ.3(ಸಿ) ಎಂದು ಗುರುತಿಸಲಾಯಿತು. ಸದರಿ ಮುದ್ದೆಮಾಲುಗಳನ್ನು ಆರೋಪಿಯ ಕಡೆಯಿಂದ ಜಪ್ತಿಪಡಿಸಿಕೊಂಡಿರುತ್ತಾರೆ. ಮುದ್ದೆಮಾಲುಗಳನ್ನು ನೋಡಿದರೆ ಗುರುತಿಸುತ್ತೇನೆ.

**ಪಾಟೀ ಸವಾಲು: ಆರೋಪಿ ಪರ ಶ್ರೀ. ಎಸ್.ಎಸ್.ಪಿ. ವಕೀಲರಿಂದಃ**

ಗೋವಿಂದಪುರಕ್ಕೆ 10.15 ಗಂಟೆಗೆ ಹೋಗಿರುತ್ತೇವೆ. ಅಲ್ಲಿ ನಿಂತು ವಾಚ್ ಮಾಡಿದ ಬಗ್ಗೆ ನನಗೆ ನೆನಪಿಲ್ಲ. ಪಂಚನಾಮೆಯನ್ನು ಗೋವಿಂದಪುರ ಗ್ರಾಮದ ಹೊಟೆಲನಲ್ಲಿ ಬರೆದಿರುತ್ತಾರೆ. ಪಂಚನಾಮೆಯನ್ನು ಚಾಸಾ 1 ರವರು ಬರೆದಿಲ್ಲ ಆದರೆ ಅವರ ಸಿಬ್ಬಂದಿಗಳು ಬರೆದಿರುತ್ತಾರೆ. ಸದರಿ ಸಿಬ್ಬಂದಿ ಹೆಸರನ್ನು ಹೇಳಲು ಬರುವುದಿಲ್ಲ. ಗೋವಿಂದಪುರದಲ್ಲಿ ನಮ್ಮ ತೋಟಕ್ಕೆ ಹೋಗಿರುತ್ತೇನೆ. ಅಲ್ಲಿ ಜನರು ನಿಂತಿರುವುದನ್ನು ನೋಡಿ ನಾನು ಹೋಗಿರುತ್ತೇನೆ. ಅಲ್ಲಿ 15 ರಿಂದ 20 ಜನರು ಪಂಚನಾಮೆ ವೇಳೆಯಲ್ಲಿ

-2-

ನಿಂತಿದ್ದರು. ನನ್ನ ಜೊತೆ 3 ಜನರ ಸಹಿಯನ್ನು ಪಂಚನಾಮೆಗೆ ತೆಗೆದುಕೊಂಡಿದ್ದು ಆದರೆ ಅವರ ಹೆಸರನ್ನು ನನಗೆ ಹೇಳಲು ಬರುವುದಿಲ್ಲ. ಸದರಿಯವರು ಸಹ ನನ್ನ ಜೊತೆಯಲ್ಲಿಯೇ ನಿಂತಿದ್ದರು. ನಮ್ಮ ಹೊಲ ಸ್ಥಳದಿಂದ 2–3 KM ದೂರ ಇರುತ್ತದೆ. ರಟ್ಟಿನ ಬಾಕ್ಸ ಬಿಳಿ ಬಣ್ಣದಲ್ಲಿ ಇದ್ದು ಯಾವುದೇ ಲೇಬಲ್ ಇರಲಿಲ್ಲ. ಅಲ್ಲಿ 3–4 ಜನ ಪೊಲೀಸರು ಇದ್ದರು. ಘಟನಾ ಸ್ಥಳದ ಚಕಬಂದಿ ನನಗೆ ಹೇಳಲು ಬರುವುದಿಲ್ಲ. ಪಂಚನಾಮೆಯನ್ನು ನನ್ನ ಸಮಕ್ಷಮ ಮಾಡಿದ್ದು ನಾನು ಅಲ್ಲಿ ಹಾಜರಿದ್ದೇನು ಮತ್ತು ಅಲ್ಲಿ ಮುದ್ದೆಮಾಲುಗಳನ್ನು ಜಪ್ತಿಪಡಿಸಿಕೊಂಡಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 42 ಓ.ಟಿ. ಪೌಚುಗಳನ್ನು ಜಪ್ತಿಪಡಿಸಿಕೊಂಡು ಒಂದನ್ನು ರಾ.ಪ. ಕುರಿತು ತೆಗೆದಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಂದೆ ಯಾವುದೇ ಪಂಚನಾಮೆ ಮಾಡದೇ ಇದ್ದರು ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿ.ಪಿ.3 ರಲ್ಲಿ ಬರೆದಿರುವ ಅಂಶಗಳ ಬಗ್ಗೆ ನನಗೆ ಗೊತ್ತಿಲ್ಲ.

**ಮರುವಿಚಾರಣೆಃ ಇಲ್ಲಃ**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)

**ಓ.ಹೆ.ಕೆ. ಸರಿ ಇದೆ**

ಸಹಿ/-

**ನ್ಯಾಯಿಕ ದಂಡಾಧಿಕಾರಿಗಳು, ಇಂಡಿ.**